ಓ.ಎಸ್. ನಂ. 126/2014

ಡಿ.ಡಬ್ಲ್ಯೂ: 01 (ಕೊಟ್ರೇಶ)

ದಿನಾಂಕಃ 09.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 4-16 ನೇ ಪ್ರತಿವಾದಿ ಪರ – ಶ್ರೀ ಬಿ ಬಿ ಆರ್ ವಕೀಲರಿಂದ.

ನಮ್ಮ ತಂದೆ 4 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಅವರುಗಳು ನಾನು, ಮೃತ ಶಿವಾನಂದ, ಲಲಿತಾ, ಮಂಗಳಾ, ನಾಗರಾಜ, ಮೃತ ಪರಶುರಾಮ. ಮೃತ ಶಿವಾನಂದ ಅವರ ಹೆಂಡತಿ, ಮಕ್ಕಳು ಇದ್ದಾರೆ. ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ. ಈಗ ದಾವೆಯಲ್ಲಿ ಅವರ ಹೆಸರು ಕಾಣಿಸುತ್ತಿಲ್ಲ ಎಂದರೆ ಹೌದು. ದಾವಾ ಆಸ್ತಿಗಳ ನಮ್ಮ ತಂದೆ ತಾಯಿಯ ಕಡೆಯಿಂದ ಬಂದಿರುತ್ತವೆ. ನನ್ನ ತಂದೆ ತಾಯಿಯ ಹೆಸರು ನಾಗಜ್ಜಿ, ನನ್ನ ತಂದೆ ತಂದೆಯ ಹೆಸರು ನಾಗಲಿಂಗಜ್ಜ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ಈವರೆಗೂ ದಾವಾ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲ. ಪಾಲು ವಿಭಾಗ ಮಾಡಿಕೊಳ್ಳಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆ ಎಲೆಕ್ಟ್ರಿಕ್ ಕಾಂಟ್ರಾಕ್ಟರ್ ಆಗಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಚಿಕ್ಕಪ್ಪನಾದ ಕೊಟ್ರೇಶಪ್ಪ ವ್ಯವಸಾಯ ಮಾಡುತ್ತಿದ್ದರು ಎಂದರೆ ಒಟ್ಟಿಗೆ ಇದ್ದಾಗ ಎಲ್ಲರೂ ಮಾಡುತ್ತಿದ್ದರು. ಪ್ರತಿವಾದ ಪತ್ರ ಸಲ್ಲಿಸಲು ಯಾರು ಮಾಹಿತಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ವಕೀಲರಿಗೆ ಗೊತ್ತು. ಉಳಿದ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನೇನು ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾವು ಯಾವುದೇ ದಾಖಲಾತಿ ಸಲ್ಲಿಸಿರುವುದಿಲ್ಲ.

ದಿಃ 21.06.2008 ರ ಪಾಲು ವಿಭಾಗ ಪತ್ರ ಈಗ ನೋಡುತ್ತಿದ್ದು, ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ತಾತ ನಾಗಲಿಂಗಜ್ಜನಿಗೆ 5 ಜನ ಮಕ್ಕಳು. ಅವರುಗಳು ಮೃತ ದೊಡ್ಡಲಿಂಗಪ್ಪ, ನನ್ನ ತಂದೆ ಮೃತ ಶಿವಬಸಪ್ಪ, ಮೃತ ಚಂದ್ರಪ್ಪ, ಮೃತ ಕೊಟ್ರೇಶಪ್ಪ, ವಾದಿ ಗುರುಸ್ವಾಮಿಯಪ್ಪ. ಪ್ರತಿವಾದಿ 1-5 ರವರು ಶಿವಬಸಪ್ಪ ಅವರ ವಾರಸುದಾರರಾಗಿರುತ್ತಾರೆ ಎಂದರೆ ಹೌದು.

ದಿಃ 21.06.2008 ರಂದು ಮಾಡಿಕೊಂಡ ಪಾಲು ವಿಭಾಗದ ಸಮಯದಲ್ಲಿ ನಾನು ಹಾಜರುರಿದ್ದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನನಗೂ ಅದಕ್ಕೂ ಸಂಬಂಧ ಇಲ್ಲ. ನನ್ನ ತಾಯಿ ಹೆಬ್ಬೆಟ್ಟು ಸಹಿ ಹಾಕುತ್ತಾರೆ. ಚಿಕ್ಕಪ್ಪ ಕೊಟ್ರೇಶಪ್ಪ ಸಹಿ ಮಾಡುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆ ಇದ್ದಾಗಲೇ 1981 ರ ಮರಣ

ಶಾಸನ ತೋರಿಸಿರುತ್ತಾರೆ. ಸದರಿ ಮರಣ ಶಾಸನ ನಮ್ಮ ಅಜ್ಜಿಯ ಜೀವಂತ ಕಾಲದಲ್ಲಿ ಅವರ ಬಳಿ ಇದ್ದು, ಅವರ ಮರಣದ ನಂತರ ನಮ್ಮ ತಂದೆಗೆ ಬಂದಿರುತ್ತದೆ. ಅದು ನಮ್ಮ ಬಳಿ ನಮ್ಮ ಅಜ್ಜಿ ತೀರಿದ ನಂತರ ಬಂದಿರುತ್ತದೆ. ನನ್ನ ತಾತನ ಅಕ್ಕನಾದ ಗಂಗವ್ವ ಬೇರೆ ಕಡೆ ಇದ್ದರು, ನನ್ನ ತಂದೆ ಹಾಗೂ ಅವರ ಒಡಹುಟ್ಟಿದವರೆಲ್ಲ ಬೇರೆ ಕಡೆ ಇದ್ದರು ಎಂದರೆ ಎಲ್ಲರೂ ಒಟ್ಟಾಗಿ ಇದ್ದರು. ನಾನು ಹೇಳುತ್ತಿರುವ ಮರಣ ಶಾಸನವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಯಾವ ಆಸ್ತಿಗಳನ್ನು ಬರೆದುಕೊಟ್ಟಿದ್ದಾರೆ ಎಂದು ತೋರಿಸಿದ್ದಾರೆ. ಅದರಲ್ಲಿ ಸ್ಥಿರ ಆಸ್ತಿ ಎಂದು ಮಾತ್ರ ಇದೆ, ಅದರಲ್ಲಿ ಯಾವ ಯಾವ ಆಸ್ತಿಗಳು ಎಂದು ತೋರಿಸಿರುವುದಿಲ್ಲ.

ನಾನು ಹಾಜರುಪಡಿಸಿರುವ ಮರಣ ಶಾಸನದಲ್ಲಿ 2 ಕಡೆ ತಿದ್ದುಪಡಿಯಾಗಿದೆ ಎಂದರೆ ಹೌದು. ತಿದ್ದುಪಡಿ ಮಾಡಿದಾಗ ಸಾಮಾನ್ಯವಾಗಿ ಸಣ್ಣ ಸಹಿಯನ್ನು ಮಾಡುತ್ತಾರೆ ಎಂದರೆ ಹೌದು. ಆ ರೀತಿ ಮರಣ ಶಾಸನದಲ್ಲಿ ಸಣ್ಣ ಸಹಿ ಇಲ್ಲ ಎಂದರೆ ಹೌದು. ಆ ಬಗ್ಗೆ ದಾಖಲಾತಿ ಬರಹಗಾರರಿಗೆ ಗೊತ್ತು. ಗಂಗಮ್ಮ ಲೇಸಿ ಪೆನ್‌ಶನ್ ಬರುತ್ತಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಗೊತ್ತಿತ್ತೆ ಎಂದರೆ ಆ ರೀತಿ ಆಕೆಗೆ ಬರುತ್ತಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು, ನನ್ನ ತಂದೆ, ನನ್ನ ತಂದೆಯ ಒಡಹುಟ್ಟಿದವರು ಉಜ್ಜಿನಿಯಲ್ಲಿದ್ದ ಮನೆಯಲ್ಲಿ ವಾಸವಾಗಿದ್ದೆವು ಎಂದರೆ ಬೇರೆ ಬೇರೆ ಕಡೆ ವಾಸವಾಗಿದ್ದೆವು. ನನ್ನ ಚಿಕ್ಕಪ್ಪಂದಿರು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ನನಗೂ ಹಾಗೂ ನನ್ನ ಚಿಕ್ಕಪ್ಪಂದಿರಿಗೂ ನನ್ನ ಬಾಲ್ಯದಿಂದ ಸಂಪರ್ಕ ಇಲ್ಲ.

ನನ್ನ ಮದುವೆಯ ಸಮಯದಲ್ಲಿ ನನ್ನ ಚಿಕ್ಕಪ್ಪಂದಿರು ಬಂದಿರಲಿಲ್ಲ. ನನ್ನ ಚಿಕ್ಕಪ್ಪನಾದ ಕೊಟ್ರೇಶಪ್ಪನ ಮಗಳಿಗೆ ಯಾರು ಧಾರೆ ಏರೆದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನೇ ಅವರಿಗೆ ಧಾರೆ ಏರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಮ್ಮ ಚಿಕ್ಕಪ್ಪಂದಿರೆಲ್ಲ ಚೆನ್ನಾಗಿದ್ದೆವು ಎಂದರೆ ಸರಿಯಲ್ಲ.

ನಮಗೆ ಗಂಗವ್ವ ಬರೆದುಕೊಟ್ಟಿರುವ ಮರಣ ಶಾಸನದನ್ವಯ ನಾವು ಮಾಲೀಕರೆಂದು ಈ ದಾವೆಯಲ್ಲಿ ಕೇಳಿರುತ್ತೇವೆ. ನನ್ನ ಚಿಕ್ಕಪ್ಪಂದಿರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಸಲ್ಲಿಸಿರುವ ದಾವೆಯ ಬಗ್ಗೆ ನಮಗೆ ಗೊತ್ತು. ಮರಣ ಶಾಸನದಲ್ಲಿ ಯಾವುದೇ ಆಸ್ತಿಯ ವಿವರ ಬರೆಯದ ಕಾರಣ ನಮಗೆ ಪಾಲು ವಿಭಾಗ ಪತ್ರದಲ್ಲಿರುವ ಆಸ್ತಿಗಳಿಗೆ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನವನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮರಣ ಶಾಸನವನ್ನು ಆತ್ಮೀಯರಾದ ವಕೀಲರ ಮೂಲಕ ನನ್ನ ತಂದೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಗಂಗವ್ವ ಅವರು ಮರಣ ಶಾಸನಕ್ಕೆ ಹೆಬ್ಬೆಟ್ಟು ಹಾಕಿರುವುದಿಲ್ಲ, ಅದನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಓ.ಎಸ್. ನಂ. 126/2014

ಡಿ.ಡಬ್ಲ್ಯೂ: 01 (ಕೊಟ್ರೇಶ)

ದಿಃ 21.06.2008 ರಂದು ನಮ್ಮ ಕುಟುಂಬದವರು ಹಿರಿಯರ ಮುಂದೆ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರ ಆಧಾರದ ಮೇರೆಗೆ ಕಂದಾಯ ದಾಖಲಾತಿಗಳು ಆಗಿವೆ ಎಂದರೆ ಸರಿಯಲ್ಲ. ಅದನ್ನು ನೊಂದಣಿ ಮಾಡಿಸುವ ಸಮಯದಲ್ಲಿ ಹಿಂದೇಟಾಗಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಅದಕ್ಕೆ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ 2000 ರಲ್ಲಿ ಮೃತಪಟ್ಟಿರುತ್ತಾರೆ. ಆಗ ನನಗೆ ಅಂದಾಜು 40 ವಯಸ್ಸಾಗಿತ್ತು. ನನ್ನ ತಂದೆ ಜೀವಂತ ಇದ್ದಾಗ ಅವರ ಒಡಹುಟ್ಟಿದವರೊಂದಿಗೆ ಅವರು ಪಾಲು ವಿಭಾಗ ಮಾಡಿಕೊಂಡಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ಮರಣ ಶಾಸನದಲ್ಲಿ ಇರುವ ಆಸ್ತಿಗಳು ಅವರು ದುಡಿದು ಖರೀದಿ ಮಾಡಿರುತ್ತಾರೆ. ಅವರು ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಬಲ್ಲೀರಾ ಎಂದರೆ ನಮ್ಮ ವಕೀಲರನ್ನು ಕೇಳಬೇಕಾಗುತ್ತದೆ. ಸದರಿ ಮರಣ ಶಾಸನದಲ್ಲಿರುವ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ನಾವು ಮತ್ತು ನಮ್ಮ ಚಿಕ್ಕಪ್ಪಂದಿರು 2008 ರಲ್ಲಿ ಪಾಲು ವಿಭಾಗಕ್ಕೆ ಒಳಗೊಂಡ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪಾಲು ವಿಭಾಗ ಪತ್ರವನ್ನು ಸೃಷ್ಟಿಸಲಾಗಿದೆ. ನನ್ನ ತಾಯಿ ಅದಕ್ಕೆ ಹೆಬ್ಬೆಟ್ಟು ಗುರುತು ಹಾಕಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಹೆಬ್ಬೆಟ್ಟು ಗುರುತಿನ ಬಗ್ಗೆ ವಿಚಾರಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. ನನ್ನ ತಾಯಿ ಹಾಗೂ ಚಿಕ್ಕಪ್ಪಂದಿರು ಸೇರಿ 2008 ರಲ್ಲಿ ಕುಟುಂಬದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರಣ ಶಾಸನವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.